ಶ್ರೀ ವಾಟಾಳ್ ನಾಗರಾಜ್ : ಇದರಲ್ಲಿ ಸಮಸ್ಯೆ ಮುಖ್ಯವಾದುದು. ಇದು ಕಾಂಗ್ರೆಸ್‌ನವರು, ಜನತಾ ದಳದವರು ಅಥವಾ ಕನ್ನಡ ಚಳುವಳಿಯವರು ಎನ್ನುವುದು ಮುಖ್ಯವಲ್ಲ. ಇಲ್ಲಿ ಇರುವುದು ಸಮಸ್ಯೆ ಮುಖ್ಯವಾದುದು. ಇದು ಚರ್ಚೆಯಾಗಬೇಕು. ಇಲ್ಲಿ ರಾಜಕೀಯದ ಪ್ರಶ್ನೆ ಬರುವುದಿಲ್ಲ. ಇದು ಇಡೀ ರಾಜ್ಯದ ಸಮಸ್ಯೆ.

(ಗೊಂದಲ)

ಶ್ರೀ ಜಿ. ರಾಜುಗೌಡ : ನಮಗೆ ನಿಲುವಳಿ ಸೂಚನೆ ಬೇಕಾಗಿಲ್ಲ. ನಾವು ಕಳುಹಿಸಿರುವ ಗಮನ ಸೆಳೆಯುವ ಸೂಚನೆಯೇ ಬರಲಿ.

(ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್, ದಯವಿಟ್ಟು ಕುಳಿತುಕೊಳ್ಳಬೇಕು. ಈಗ ಅವರು ಹೇಳಿದ್ದು ತಾನೇ ಏನು ನಿಲುವಳಿ ಸೂಚನೆ ಮೂಲಕ ಬಂದರೆ ನಾವು ಭಾಗವಹಿಸುವುದಕ್ಕೆ ಆಗುವುದಿಲ್ಲ ಎಂದರೆ, ಅಷ್ಟಕ್ಕೇ ಮೇಲೆ ಏತಕ್ಕೆ ಬೀಳುತ್ತೀರಿ?

(ಗೊಂದಲ)

ಅಧ್ಯಕ್ಷರು : ಈ ಸಮಸ್ಯೆ ಉಗ್ರವಾದುದು ಎನ್ನತಕ್ಕಂಥ ದೃಷ್ಟಿಯಿಂದಲೇ ಇದನ್ನು ನಾನು ಗಮನ ಸೆಳೆಯುವ ಸೂಚನೆಗೆ ಮೊದಲು ಒಪ್ಪಿಗೆಯನ್ನು ಕೊಟ್ಟೆ. ಅನಂತರ ನಿಲುವಳಿ ಸೂಚನೆ ತಾವು ಕಳುಹಿಸಿಕೊಟ್ಟಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ನಿಯಮ 68 ರ ಅನ್ವಯ ಒಂದು ಅಲ್ಪಕಾಲಾವಧಿ ಚರ್ಚೆಗೆ ಅವಕಾಶ ಕೊಡಿ ಎಂದ ಹೇಳಿದ್ದಾರೆ. ಅದಕ್ಕೆ ಉದ್ರೇಕದ ವಾತಾವರಣ ಏತಕ್ಕೆ ಬೇಕು? ಆಗಬಹುದು, ಮಾಡೋಣ.

ಶ್ರೀ ಜೆ.ಸಿ. ಮಾಧುಸ್ವಾಮಿ : ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿದರೆ ಅದನ್ನು ಹಾಕಲಿಲ್ಲ ಎಂದು ಹೇಳಿದರೆ ಹೇಗೆ?

(ಗೊಂದಲ)

ಅಧ್ಯಕ್ಷರು : ಅದರ ಬಗ್ಗೆ ನಿಮ್ಮ ಲೀಡರ್‌ನ್ನು ಕೇಳಿ.

(ಗೊಂದಲ)

ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕವನ್ನು ಹೆಚ್ಚು ಮಾಡಿರುವ ಬಗ್ಗೆ

ಶ್ರೀ ಕೆ.ಎಸ್. ಈಶ್ವರಪ್ಪ : ಎಸ್.ಎಸ್. ಎಲ್.ಸಿ. ಪರೀಕ್ಷೆಗೆ ಈಸಾರಿ ಪರೀಕ್ಷೆ ಪೀಜನ್ನು ಜಾಸ್ತಿ ಮಾಡಿದ್ದಾರೆ. ಈಗ ಅವರು 85 ರೂಪಾಯಿ ಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ.

(ಗೊಂದಲ)

ಶ್ರೀ ಕೆ.ಎಸ್. ಈಶ್ವರಪ್ಪ : ಶಿವಮೊಗ್ಗದಲ್ಲಿ ಈಗಾಗಲೇ ವಿದ್ಯಾರ್ಥಿಗಳು ಹೋರಾಟವನ್ನು ಶುರುಮಾಡಿದ್ದಾರೆ.

(ಗೊಂದಲ)

ಅಧ್ಯಕ್ಷರು :ಮೂರು ನಾಲ್ಕು ಜನ ಮಾನ್ಯ ಸದಸ್ಯರು ಏಕಕಾಲದಲ್ಲಿ ಮಾತನಾಡಿದರೆ ಯಾವುದೂ ರೆಕಾರ್ಡ್‌ಗೆ ಹೋಗುವುದಿಲ್ಲ. ಒಬ್ಬೊಬ್ಬರು ಅವಕಾಶವನ್ನು ತೆಗೆದುಕೊಂಡು ಮಾತನಾಡಿ. ಈಗ ಇಲ್ಲಿ ಎಜುಕೇಷನ್ ಮಿನಿಸ್ಟರ್ ಕೂಡಾ ಇಲ್ಲ. ಅವರು ವಿಧಾನ ಪರಿಷತ್ತಿನಲ್ಲಿದ್ದಾರೆ.

(ಗೊಂದಲ)

ಶ್ರೀ ಕೆ. ಎಸ್. ಈಶ್ವರಪ್ಪ : 13ನೇ ತಾರೀಖು ಪರೀಕ್ಷೆ ಕಟ್ಟುವುದಕ್ಕೆ ಲಾಸ್ಟ್‌ಡೇಟ್ ಎಂದು ಹೇಳಿದ್ದಾರೆ. ಈಗ 85 ರೂಪಾಯಿ ಆಗಿದೆ. ನಾಳೆ ನಾಡಿದ್ದು ನಾವು ಊರಿಗೆ ಹೋಗುತ್ತಿದ್ದೇವೆ. ಇವರು 9ನೇ ತಾರೀಖಿಗೆ ಉತ್ತರವನ್ನು ಕೊಟ್ಟರೆ ಇಡೀ ರಾಜ್ಯದಲ್ಲಿಯೇ ಬೆಂಕಿ ಹತ್ತಿಕೊಳ್ಳುತ್ತದೆ. ಶಿವಮೊಗ್ಗದಲ್ಲಿ ಹೋರಾಟವನ್ನು ಶುರು ಮಾಡಿದ್ದಾರೆ. ಹೈಸ್ಕೂಲು ಹುಡುಗರು ಮೆರವಣಿಗೆ ಮತ್ತು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ.

ಅಧ್ಯಕ್ಷರು : ನೀವು ಬರೆದಿರುವ ಪತ್ರವನ್ನು ಸರ್ಕಾರಕ್ಕೆ ಕಳುಹಿಸಿಕೊಡುತ್ತೇನೆ.

11.00 ಎ.ಎಂ

ಶ್ರೀ ಕೆ.ಎಸ್. ಈಶ್ವರಪ್ಪ : ಎಲ್ಲಾ ಅದ್ಯಾಪಕರು ಇಲ್ಲಿಗೆ ಫೋನ್ ಮಾಡುತ್ತಿದ್ದಾರೆ. ಶಿವಮೊಗ್ಗದಲ್ಲಿ ಎಲ್ಲಾ ಹೈಸ್ಕೂಲ್ ವಿದ್ಯಾರ್ಥಿಗಳು ಮೆರವಣಿಗೆಯನ್ನು ಮಾಡುತ್ತಿದ್ದಾರೆ. ಧರಣಿ ಕುಳಿತಿದ್ದಾರೆ. ಸತ್ಯಾಗ್ರಹ ಮಾಡುತ್ತಿದ್ದಾರೆ. ಎಸ್.ಎಸ್.ಎಲ್.ಸಿ. ಪರೀಕ್ಷಾ ಶುಲ್ಕ ಈಗ 85 ರೂಪಾಯಿಗೆ ಏರಿಸಿದ್ದಾರೆ. ಡಬಲ್ ಆಗಿದೆ. ಒಂದೇ ಸಾರಿ 85 ರೂಪಾಯಿಗೆ ಏರಿಸಿದ್ದಾರೆ. ಯಾವ ಕಾಲದಲ್ಲಿಯೂ ಇಷ್ಟೊಂದು ಏರಿಸಿರಲಿಲ್ಲ.

ಅಧ್ಯಕ್ಷರು : ಕುಳಿತುಕೊಳ್ಳಿ, ನಾನು ಅದನ್ನು ಇನ್ನು ಅಡ್ಮಿಟ್ ಮಾಡಿಲ್ಲ.

(ಗೊಂದಲ)

ಅಧ್ಯಕ್ಷರು : ಸಿದ್ಧನಗೌಡರ್, ಎಷ್ಟು ಒಳ್ಳೆಯವರು, ಕುಳಿತುಕೊಳ್ಳಿ ಎಂದರೆ ಕುಳಿತುಕೊಂಡು ಬಿಟ್ಟರು. ನೀವು ಬನ್ನಿಕೋಡ್‌ರವರೇ ಕುಳಿತುಕೊಳ್ಳಿ.

ಶ್ರೀ ಪಿ.ಸಿ. ಸಿದ್ಧನಗೌಡರ್ : ಅಲ್ಲಿ ರೈತರಿಗೆ ತುಂಬಾ ತೊಂದರೆಯಾಗಿದೆ. ಮಾನ್ಯ ಮುಖ್ಯಮಂತ್ರಿಗಳು ಅವರನ್ನು ಕರೆಸಿ ಏನಾದರೂ ಬಗೆಹರಿಸುತ್ತಿರಾ?

(ಗೊಂದಲ)

ಪೋಲೀಸರ ಹಾಗೂ ಫುಡ್ ಸೆಲ್‌ನವರ ಹೆರಾಸ್‌ಮೆಂಟ್‌ನಿಂದ ಆಯಿಲ್ ಮಿಲ್‌ಗಳನ್ನು ಮುಚ್ಚಿರುವ ಬಗ್ಗೆ.

ಶ್ರೀ ಡಿ.ಬಿ. ಚಂದ್ರೇಗೌಡ : ಮಾನ್ಯ ಅಧ್ಯಕ್ಷರೇ, ನಾನು ತಮಗೆ ಒಂದು ಪತ್ರವನ್ನು ಬರೆದಿದ್ದೇನೆ. ಗೌರಿಹಬ್ಬ ಬುಧವಾರ ಇದೆ. ಇನ್ನು 4-5 ದಿವಸ ಇದೆ. ಇಲ್ಲಿ ಎಲ್ಲಾ ಎಣ್ಣೆ ಅಂಗಡಿಗಳನ್ನು ಮುಚ್ಚಿದ್ದಾರೆ. ಮುಚ್ಚುವುದಕ್ಕೆ ಕಾರಣವೇನೆಂದರೆ, ನಮ್ಮ ಟ್ಯಾಕ್ಸೇಷನ್ ಪಾಲಿಸಿ ಮತ್ತೆ ಪೋಲೀಸ್‌ನವರ ಮತ್ತು ಫುಡ್‌ಸೆಲ್‌ನವರ ಹೆರಾಸ್‌ಮೆಂಟ್‌ನಿಂದ ಮುಚ್ಚಿದ್ದಾರೆ. ಸಂಪೂರ್ಣವಾಗಿ ಬೆಳಗಾಂ ಮತ್ತು ಎಲ್ಲಾ ಭಾಗದಲ್ಲಿರತಕ್ಕ ಎಲ್ಲಾ ಆಯಿಲ್ ಮಿಲ್‌ಗಳನ್ನು ಮುಚ್ಚಿದ್ದಾರೆ. ಎಲ್ಲಾ ಜಿಲ್ಲೆಗಳಲ್ಲೂ ಮುಚ್ಚಿ ಬಿಟ್ಟಿದ್ದಾರೆ. ಎಣ್ಣೆ ಒಂದು ಕಡೆ ಸಿಕ್ಕುತ್ತಿಲ್ಲ, ಮತ್ತೊಂದು ಕಡೆ harassment by the police of food cell. ಮೇಲಾಗಿ ಎಣ್ಣೆ ಕೆ.ಜಿ.ಗೆ 60ರಿಂದ 80 ರೂಪಾಯಿಯಷ್ಟು ಆಗಿದೆ. ಅಷ್ಟೋ ಇಷ್ಟೋ ಸಿಗುತ್ತದೆ ಅಂದರೆ ಅದು ಕೂಡ ಅಡಲ್ಟರೇಟೆಡ್ ಟ್ಯಾಕ್ಸೇಷನ್ ಪಾಲಿಸಿ ನಮ್ಮ ಕರ್ನಾಟಕದಲ್ಲಿ ಇದೆ. ತಮಿಳುನಾಡಿನಲ್ಲಿ ಸುಮಾರು 30 ರೂಪಾಯಿ ಟ್ಯಾಕ್ಸ್ ಇದ್ದರೆ, ನಮ್ಮ ರಾಜ್ಯದಲ್ಲಿ 131 ರೂಪಾಯಿ ಟ್ಯಾಕ್ಸ್ ಇದೆ.ಹೀಗಾಗಿ ಕರ್ನಾಟಕದಲ್ಲಿ ಬೆಳೆದಂಥ ಎಣ್ಣೆ ಬೀಜ ಕ್ರಶಿಂಗ್‌ಗಾಗಿ ಹೊರಗಡೆ ಹೋಗುತ್ತಿದೆ. ಆ ಕಾರಣದಿಂದ ಈ ಸಮಸ್ಯೆ ಉದ್ಭವವಾಗಿದೆ. ಹಬ್ಬ ಇರುವುದರಿಂದ ಸರ್ಕಾರ ಏನಾದರೂ ಒಂದು ಹೇಳಿಕೆ ಕೊಡಬೇಕು.

ವಿದೇಶದಿಂದ ಎಣ್ಣೆ ತರಿಸಬೇಕೆಂಬ ತೀರ್ಮಾನಕ್ಕೆ ಕೇಂದ್ರಸರ್ಕಾರ ಬಂದಿದೆ. ನಮ್ಮಲ್ಲಿ ಈ ಸ್ಥಿತಿ ಇದೆ. ಈ ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿರುವ ವ್ಯತ್ಯಾಸವನ್ನು ಸರ್ಕಾರ ಯಾವಾಗಲಾದರೂ ಸರಿಪಡಿಸಲಿ. ತಕ್ಷಣ ಎಣ್ಣೆ ಸಿಗುವಂತಹ ಪ್ರಯತ್ನ ಮಾಡಿ.